ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ವಿಷಯ: ಸೃಜನೆಗೊಂಡ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವ ಬಗೆಗೆ.

ಉಲ್ಲೇಖ: 1. ದಿನಾಂಕ 2013ರ ಜೂನ್ 13ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸು.

2. ದಿನಾಂಕ: 14.06.2013ರಂದು ನಡೆದ ಪ್ರಶಾಸನ ಸಮಿತಿ 15ನೇ ಸಭೆ ನಿರ್ಣಯ ಸಂಖ್ಯೆ: 06ರ ಅನುಮೋದನೆ ಹಾಗೂ ಅಂಗೀಕಾರ.

ಪ್ರಸ್ತಾವನೆ:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಖ್ಯೆ ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರ ಸರ್ಕಾರಿ ಆದೇಶದಂತೆ ಯುಜಿಸಿ ವೇತನ ಪಡೆಯುವ ಬೋಧಕ ಹುದ್ದೆಗಳು ಸೃಜನೆಗೊಂಡಿದ್ದವು. ಸಂಖ್ಯೆ ಇಡಿ 213 ಯುಆರ್‌ಸಿ 2011; ದಿನಾಂಕ: 25.05.2012ರ ಅನ್ವಯ 'ವೃಂದ ಮತ್ತು ನೇಮಕಾತಿ ಪರಿನಿಯಮ–2012' ಅನುಮೋದನೆಗೊಂಡಿತ್ತು. ದಿನಾಂಕ: 16.06.2012ರಂದು ನಡೆದ ಪ್ರಶಾಸನ ಸಮಿತಿ 5ನೇ ಸಭೆಯಲ್ಲಿ ಯುಜಿಸಿ ವೇತನಶ್ರೇಣಿ ಪಡೆಯುವ ಬೋಧಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅನುಮತಿಯನ್ನು ಪಡೆಯಲಾಗಿತ್ತು. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 73; ದಿನಾಂಕ: 03.06.2013ರ ಅನ್ವಯ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000; ಸೆಕ್ಷನ್ 57ರಲ್ಲಿ ಸೂಚಿಸಿರುವಂತೆ 'ಯುಜಿಸಿ ವೇತನಶ್ರೇಣಿಯ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ'ಯನ್ನು ರಚಿಸಲಾಗಿತ್ತು. ದಿನಾಂಕ 2013ರ ಜೂನ್ 13ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸಿನ ಅನ್ವಯ ದಿನಾಂಕ: 14.06.2013ರಂದು ನಡೆದ ಪ್ರಶಾಸನ ಸಮಿತಿ 15ನೇ ಸಭೆಯ ನಿರ್ಣಯ ಸಂಖ್ಯೆ: 06ರ ಅನುಮೋದನೆಯ ಹಿನ್ನೆಲೆಯಲ್ಲಿ ಸೇವಾನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ತಕ್ಷಣ ಜಾರಿಗೆ ಬರುವಂತೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ.

## ನೇಮಕಾತಿ ಆದೇಶ

ಸಂಖ್ಯೆ: ಕಸಂವಿ/ಯುಜಿಸಿ–ವೇ.ಶ್ರೇ.1/ಪ್ರಾ/2013–14 /194 ದಿನಾಂಕ: 14.06.2013

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳ ಅನ್ವಯ ಡಾ. ಶ್ರೀನಿವಾಸ ವರಖೇಡಿ –ಇವರನ್ನು ಶಾಸ್ತ್ರ ನಿಕಾಯದ ಪ್ರಾಧ್ಯಾಪಕ ಹುದ್ದೆಗೆ ವೇತನಶ್ರೇಣಿ: ರೂ. 37,400–67,000 with AGP of Rs. 10,000/– ಹಾಗೂ ಇತರೆ ಭತ್ಯೆಗಳ ಸಹಿತ ತಕ್ಷಣ ಜಾರಿಗೆ ಬರುವಂತೆ ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿದೆ. ನೇಮಕಾತಿ ಹೊಂದಿದ ನೌಕರರ ಎರಡು ವರ್ಷದ ಪ್ರೊಬೇಷನರಿ ಅವಧಿ ತೃಪ್ತಿಕರವಾಗಿ ಮುಗಿದ ನಂತರ ಇವರ ಹುದ್ದೆ ಖಾಯಂಗೊಳ್ಳುತ್ತದೆ. ಶಾಸ್ತ್ರ ನಿಕಾಯ ಪ್ರಾಧ್ಯಾಪಕ ಹುದ್ದೆಗೆ ಸಂಬಂಧಿಸಿದ ಪ್ರಕರಣವು ನ್ಯಾಯಾಲಯದಲ್ಲಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಡಿಸಿ ಈ ಆದೇಶ ನೀಡಲಾಗಿದೆ. ಈ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕೆಲಸದ ಮೇಲೆ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಆದೇಶವು ರದ್ದಾಗುತ್ತದೆ.

ಆದೇಶದ ಮೇರೆಗೆ,

ಕುಲಸಚಿವರು

ಇವರಿಗೆ,
ಡಾ. ಶ್ರೀನಿವಾಸ ವರಖೇಡಿ
ನಂ. 24/10, 'ವೈಜಯಂತ'
ದೇವಸ್ಥಾನದ ರಸ್ತೆ, ಐ.ಟಿ.ಐ. ಬಡಾವಣೆ
ಬನಶಂಕರಿ 3ನೇ ಹಂತ
ಬೆಂಗಳೂರು – 560085.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
2. ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

KARNATAKA SAMSKRIT UNIVERSITY
Sri Chamarajendra Samskrit College Campus
Pampamahakavi Road, Chamarajpete, Bangalore - 560 018

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालय परिसरः
पम्पमहाकविमार्गः, चामराजपेटे, बेङ्गलूरु - ५६००१८.

ಕಸಂವಿ/ಸಿಬ್ಬಂದಿ/ಯುಜಿಸಿ/ಪ್ರಾ02/2013-14 ದಿನಾಂಕ: 06.10.2015

## ಜ್ಞಾಪನಾ

ವಿಷಯ: ಡಾ. ಶ್ರೀನಿವಾಸ ವರಖೇಡಿ (ಶಾಸ್ತ್ರ ನಿಕಾಯ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಇವರ ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಎಂದು ಘೋಷಿಸುವ ಬಗ್ಗೆ.

ಉಲ್ಲೇಖ:
1. ನೇಮಕಾತಿ ಆದೇಶ ಸಂಖ್ಯೆ: ಕಸಂವಿ/ಯುಜಿಸಿ-ನೇ.ಶ್ರೇ.1/ಪ್ರಾ/2013-14, ದಿನಾಂಕ:14.06.2013
2. ಕರ್ನಾಟಕ ನಾಗರಿಕ ಸೇವೆಗಳ(ಪ್ರೊಬೇಷನ್) ನಿಯಮಗಳು, ಅಧಿಸೂಚನೆ ಸಂಖ್ಯೆ ಡಿಪಿಎಆರ್ 57 ಎಸ್‌ಆರ್‌ಆರ್ 75, ದಿನಾಂಕ: 25.06.1977.
3. ದಿನಾಂಕ:22.12.2014ರ 24 ನೇ ಪ್ರಶಾಸನ ಸಮಿತಿ ಸಭೆಯ ನಿರ್ಣಯ.
4. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 67, ದಿನಾಂಕ: 06.10.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಡಾ. ಶ್ರೀನಿವಾಸ ವರಖೇಡಿ ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡಿರುತ್ತಾರೆ. ಇವರು 02 ವರ್ಷಗಳ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿರುವುದರಿಂದ ಉಲ್ಲೇಖ (02) ಆದೇಶದನ್ವಯ ಹಾಗೂ ಉಲ್ಲೇಖ (03)ರ ನಿರ್ಣಯ ಹಾಗೂ ಉಲ್ಲೇಖ (4)ರ ಮಾನ್ಯ ಕುಲಪತಿಗಳ ಆದೇಶದಂತೆ ಶಾಸ್ತ್ರನಿಕಾಯದ ಪ್ರಾಧ್ಯಾಪಕರ 02 ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ಈ ಕೆಳಕಂಡ ಕಾಲಂ [05] ರಲ್ಲಿ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಗಿನ ಷರತ್ತಿನಂತೆ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಿದೆ.

| ಕ್ರ.ಸಂ. | ಹೆಸರು, ಹುದ್ದೆ ಮತ್ತು ವಿಳಾಸ | ಸೇವೆಗೆ ಸೇರಿದ ದಿನಾಂಕ | ಸೇವೆಗೆ ಸೇರಿ 02 ವರ್ಷ ಪೂರ್ಣಗೊಂಡ ದಿನಾಂಕ | ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಎಂದು ಘೋಷಿಸುವ ದಿನಾಂಕ |
|---|---|---|---|---|
| 1 | 2 | 3 | 4 | 5 |
| 01. | ಡಾ. ಶ್ರೀನಿವಾಸ ವರಖೇಡಿ ಪ್ರಾಧ್ಯಾಪಕರು (ಶಾಸ್ತ್ರ ನಿಕಾಯ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು. | 14.06.2013 | 13.06.2015 | 14.06.2015 |

ಷರತ್ತು: ಇವರ ನೇಮಕಾತಿ ಪ್ರಕ್ರಿಯೆ ಕರ್ನಾಟಕ ರಾಜ್ಯದ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆಗಳು ದಾಖಲಾಗಿವಿಚಾರಣೆ ಹಂತದಲ್ಲಿದ್ದು, (ರಿಟ್ ಪಿಟಿಷನ್ಸ್ ಸಂಖ್ಯೆ:8748/2013(S) ಮತ್ತು 32861/2013(S) ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು, ಬದ್ಧವಾಗಿ ಮಾನ್ಯ ಕುಲಪತಿಗಳ ಆದೇಶಾನುಸಾರ ಖಾಯಂಪೂರ್ವ ಸೇವಾವಧಿಯು ತೃಪ್ತಿಕರವಾಗಿದೆಯೆಂದು ಘೋಷಿಸಿದೆ.

Slidhar N.K.
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ, ಬೆಂಗಳೂರು-18.

ಪ್ರತಿಗಳು,

1. ಡಾ. ಶ್ರೀನಿವಾಸ ವರಖೇಡಿ ಪ್ರಾಧ್ಯಾಪಕರು (ಶಾಸ್ತ್ರ ನಿಕಾಯ), ಕಸಂವಿ. 2. ಮಾನ್ಯ ಕುಲಪತಿಗಳ ಆಪ್ತಶಾಖೆ, ಕಸಂವಿ.
3. ಹಣಕಾಸು ಅಧಿಕಾರಿಗಳು, ಕಸಂವಿ. 4. ಕಛೇರಿ ಪ್ರತಿ/ರಕ್ಷತಾ ಪ್ರತಿ.

Phone: 080 - 26701303 / 26705387; e-mail: karnatakasanskrituniversity@gmail.com
दूरवाणी: ०८०-२६७०१३०३; २६७०५३८७; ई-संचि: – karnatakasanskrituniversity@gmail.com

Scanned with CamScanner